ಕರ್ನಾಟಕ ವಿಧಾನ ಪರಿಷತ್ತು

1. ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 135 (824)
2. ಸದಸ್ಯರ ಹೆಸರು : ಶ್ರೀ ಪ್ರಕಾಶ್ ಕೆ. ರಾಥೋಡ್ (ನಾಮನಿರ್ದೇಶನ ಹೊಂದಿದವರು)
3. ಉತ್ತರಿಸುವ ದಿನಾಂಕ : 09.03.2021
4. ಉತ್ತರಿಸುವ ಸಚಿವರು : ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರು

<table>
<tr><th>ಕ್ರ.ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>(ಅ)</td><td>ಕೆ.ಐ.ಎ.ಡಿ.ಬಿ. ವತಿಯಿಂದ ಸೋಂಪುರ ಹೋಬಳಿಯಲ್ಲಿ ಎಷ್ಟು ಎಕರೆ ಜಮೀನನ್ನು ಕೈಗಾರಿಕೆ ಉಪಯೋಗಕ್ಕಾಗಿ ನೀಡಲಾಗಿದೆ;</td><td>ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಯು ಬೆಂಗಳೂರು ಗ್ರಾಮಂತರ ಜಿಲ್ಲೆ, ನೆಲಮಂಗಲ ತಾಲ್ಲೂಕು, ಸೋಂಪುರ ಹೋಬಳಿಯಲ್ಲಿ ಈ ಕೆಳಕಂಡ ಕೈಗಾರಿಕಾ ಪ್ರದೇಶಗಳನ್ನು ಅಭಿವೃದ್ಧಿಪಡಿಸಿ, ಒಟ್ಟು 899 ಉದ್ದಿಮೆದಾರರುಗಳಿಗೆ 1490 ಎಕರೆ ಜಮೀನುಗಳನ್ನು ಹಂಚಿಕೆ ಮಾಡಲಾಗಿದೆ :-
<table>
<tr><th>ಕೈಗಾರಿಕಾ ಪ್ರದೇಶ</th><th>ಉದ್ದಿಮೆಗಳ ಸಂಖ್ಯೆ</th><th>ವಿಸ್ತೀರ್ಣ (ಎಕರೆಗಳಲ್ಲಿ)</th></tr>
<tr><td>ದಾಬಸ್.ಪೇಟೆ 1 ಮತ್ತು 2ನೇ ಹಂತ</td><td>73</td><td>303.00</td></tr>
<tr><td>ಸೋಂಪುರ 1 ಮತ್ತು 2ನೇ ಹಂತ</td><td>536</td><td>641.00</td></tr>
<tr><td>ಅವ್ವೇರಹಳ್ಳಿ (ದಾಬಸ್.ಪೇಟೆ 4ನೇ ಹಂತ)</td><td>288</td><td>406.00</td></tr>
<tr><td>ದಾಬಸ್.ಪೇಟೆ 5ನೇ ಹಂತ</td><td>2</td><td>140.00</td></tr>
</table></td></tr>
<tr><td>(ಆ)</td><td>ಉದ್ದಿಮೆಗಳಿಗೆ ಪ್ರತಿ ಎಕರೆ ಜಮೀನಿಗೆ ನಿಗಧಿಪಡಿಸುವ ಮೊತ್ತ ಎಷ್ಟು;</td><td>ಈ ಕೈಗಾರಿಕಾ ಪ್ರದೇಶಗಳಿಗೆ ಹಿಂದೆ ನಿಗಧಿಪಡಿಸಿದ ಹಂಚಿಕೆ ದರ ಮತ್ತು ಪ್ರಸ್ತುತ ಇರುವ ತಾತ್ಕಾಲಿಕ ಹಂಚಿಕೆ ದರದ ವಿವರ ಈ ಕೆಳಕಂಡಂತಿದೆ:-
<table>
<tr><th>ಕೈಗಾರಿಕಾ ಪ್ರದೇಶ</th><th>ಹಿಂದೆ ಹಂಚಿಕೆ ನೀಡಿದ ವಿವಿಧ ದರ (ರೂ. ಲಕ್ಷಗಳಲ್ಲಿ)</th><th>ಪ್ರಸ್ತುತ ಇರುವ ತಾತ್ಕಾಲಿಕ ಹಂಚಿಕೆ ದರ (ರೂ. ಲಕ್ಷಗಳಲ್ಲಿ)</th></tr>
<tr><td>ದಾಬಸ್.ಪೇಟೆ 1ನೇ ಹಂತ</td><td>3.50
8.00
10.00</td><td>70.00</td></tr>
</table></td></tr>
</table>

			12.00	
		ದಾಬಸ್.ಪೇಟೆ 2ನೇ ಹಂತ	15.00 24.00	70.00
		ಸೋಂಪುರ 1 ಮತ್ತು 2ನೇ ಹಂತ	57.00 73.82 70.00 ರಿಂದ 78.82 (ಉಪ ಬಡಾವಣೆ) 150.00	185.00
		ಅಪ್ಪೇರಹಳ್ಳಿ (ದಾಬಸ್.ಪೇಟೆ 4ನೇ ಹಂತ)	150.00	150.00
		ದಾಬಸ್.ಪೇಟೆ 5ನೇ ಹಂತ	139.00	139.00
(ಇ)	ಸೋಂಪುರ ಹೋಬಳಿ ನಿಗದಿತ ಪ್ರದೇಶದಲ್ಲಿ ಮಾಲಿನ್ಯ ನಿಯಂತ್ರಣ ಮಂಡಳಿ ಬಫರ್ ಝೋನ್ ಎಂದು ಗುರುತಿಸಿ ಎಷ್ಟು ಕೈಗಾರಿಕೆಗಳನ್ನು ಸ್ಥಳಾಂತರಗೊಳಿಸಿದೆ;	ಕೇಂದ್ರ ಸರ್ಕಾರದ ಪರಿಸರ ಮತ್ತು ಅರಣ್ಯ ಸಚಿವಾಲಯ ಹಾಗೂ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ಸೂಚನೆಗಳನ್ವಯ ಮತ್ತು ತಿಪ್ಪಗೊಂಡನಹಳ್ಳಿ ಜಲಾನಯನ ವಲಯ ಪ್ರದೇಶದ ದಿನಾಂಕ: 18.11.2003ರ ಅಧಿಸೂಚನೆಯನ್ವಯ ಸೋಂಪುರ ಕೈಗಾರಿಕಾ ಪ್ರದೇಶದಲ್ಲಿ ಕೈಗಾರಿಕಾ ಚಟುವಟಿಕೆಗಳಂತೆ (ಆರೆಂಜ್, ಗ್ರೀನ್ ಮತ್ತು ರೆಡ್ ವರ್ಗ) ವಲಯಗಳನ್ನು ನಿರ್ವಹಿಸಿ, ಸೋಂಪುರ 1 ಮತ್ತು 2ನೇ ಹಂತದ ಕೈಗಾರಿಕಾ ಪ್ರದೇಶದಲ್ಲಿ 15 ಮೀ. ಬಫರ್.ಗಾಗಿ 74.15 ಎಕರೆ, ಓಪನ್ ಸ್ಪೇಸ್‌ಗಾಗಿ 72.13 ಎಕರೆ ಹಾಗೂ ಪಾರ್ಕ್.ಗಾಗಿ 189.11 ಎಕರೆ ವಿಸ್ತೀರ್ಣದ ಪ್ರದೇಶವನ್ನು ಕಾಯ್ದಿರಿಸಲಾಗಿದೆ. ಸದರಿ ಕೈಗಾರಿಕಾ ಪ್ರದೇಶದಲ್ಲಿ ಹಂಚಿಕೆಯಾಗಿದ್ದ ಘಟಕಗಳಿಗೆ ಜಮೀನು ಹಂಚಿಕೆ ಮಾಡುವ ಸಲುವಾಗಿ ಸೋಂಪುರ 1 ಮತ್ತು 2ನೇ ಹಂತ ಒಂದುಗೂಡಿಸಿದ ಕೈಗಾರಿಕಾ ಪ್ರದೇಶದ ವಿನ್ಯಾಸ ನಕ್ಷೆಯಂತೆ ಆಯಾ ವಲಯಗಳಲ್ಲಿ ಅನುಮತಿ ಇರುವ ಕೈಗಾರಿಕಾ ಚಟುವಟಿಕೆಗಳಿಗೆ (ಆರೆಂಜ್, ಗ್ರೀನ್ ಮತ್ತು ರೆಡ್ ವರ್ಗ) ಅನುಗುಣವಾಗಿ ಒಟ್ಟು 119 ಉದ್ದಿಮೆದಾರರುಗಳಿಗೆ 140.54 ಎಕರೆ ವಿಸ್ತೀರ್ಣದ ನಿವೇಶನಗಳನ್ನು ಬದಲಾವಣೆ ಮಾಡಲಾಗಿದೆ.		

(ಈ)	ಹಾಲಿ ಕೈಗಾರಿಕೆಗಾಗಿ ಜಮೀನುಗಳನ್ನು ಪಡೆದಿದ್ದ ಉದ್ದಿಮೆಗಳನ್ನು ರೂ.57.00 ಲಕ್ಷ ಹಣವನ್ನು ಪಾವತಿಸಿ ಖರೀದಿಸಿದ್ದು, ಸದರಿ ಜಮೀನು ಬಫರ್ ಝೋನ್ ಎಂದು ತಿಳಿದ ಮೇಲೆ ಕೆ.ಐ.ಎ.ಡಿ.ಬಿ. ವತಿಯಿಂದ 2ನೇ ಹಂತ ನಿರ್ಮಾಣ ಮಾಡಿ ರೂ.75.00 ಲಕ್ಷಕ್ಕೆ ಹಂಚಿಕೆ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಹೌದು. ಸೋಂಪುರ 1 ಮತ್ತು 2ನೇ ಹಂತದ ಕೈಗಾರಿಕಾ ಪ್ರದೇಶದ ವಿನ್ಯಾಸ ನಕ್ಷೆಯನ್ನು ಪರಿಷ್ಕರಿಸಿದ ಕಾರಣ, ಕೈಗಾರಿಕಾ ಪ್ರದೇಶದ ತಾತ್ಕಾಲಿಕ ಹಂಚಿಕೆ ದರವನ್ನು ಎಕರೆಗೆ ರೂ.57.00 ಲಕ್ಷದಂತೆ ಹಂಚಿಕೆ ಪಡೆದ ಉದ್ದಿಮೆದಾರರುಗಳಿಗೆ ಎಕರೆಗೆ ರೂ.73.82 ಲಕ್ಷದಂತೆ ಮತ್ತು ಸೋಂಪುರ 1ನೇ ಹಂತದ ಸಬ್.ಲೇಔಟ್.ನಲ್ಲಿ ರೂ.70.00 ಲಕ್ಷದಂತೆ ಹಂಚಿಕೆ ಪಡೆದ ಉದ್ದಿಮೆದಾರರುಗಳಿಗೆ ಎಕರೆಗೆ ರೂ.78.82 ಲಕ್ಷದಂತೆ ಪರಿಷ್ಕರಿಸಲಾಗಿದೆ.
(ಉ)	ಉದ್ದಿಮೆದಾರರು ಮೊದಲು ಪಡೆದ ಜಾಗಕ್ಕೆ ರೂ.57.00 ಲಕ್ಷ ಹಣಕ್ಕೆ ನೊಂದಣಿ ಹಣವನ್ನು ಕಟ್ಟಿದ್ದು, ಹಾಲಿ ನೊಂದಾಯಿತ ಜಾಗವನ್ನು ಕೆ.ಐ.ಎ.ಡಿ.ಬಿ.ರವರು ಹಿಂಪಡೆದು ಬದಲಿ ನಿವೇಶನವಾಗಿ 2ನೇ ಹಂತದಲ್ಲಿ ನೀಡಿದ್ದು, ಹೊಸದಾಗಿ ಖರೀದಿಸುತ್ತಿರುವ ಜಾಗಕ್ಕೆ ಸಂಪೂರ್ಣ ರೂ.75.00 ಲಕ್ಷಗಳಿಗೆ ನೊಂದಣಿ ಶುಲ್ಕ ಕಟ್ಟುವಂತೆ ಒತ್ತಾಯಿಸಿರುವುದು ನಿಜವೇ; ಮೊದಲು ನೊಂದಣಿ ಸಲುವಾಗಿ ಕಟ್ಟಿದ ರೂ.57.00 ಲಕ್ಷ ಕಟ್ಟಿದ ನೊಂದಣಿ ಶುಲ್ಕವನ್ನು ಕಡಿತಗೊಳಿಸಿ ಉದ್ದಿಮೆದಾರರಿಗೆ ಅನುಕೂಲ ಮಾಡಿಕೊಡಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು?	ಹಂಚಿಕೆದಾರರು, ರೂ.57.00 ಲಕ್ಷದಂತೆ ತಾತ್ಕಾಲಿಕ ಹಂಚಿಕೆ ದರದಲ್ಲಿ ಹಣ ಪಾವತಿಸಿ ಗುತ್ತಿಗೆ ಕರಾರು ಪತ್ರವನ್ನು ಪಡೆದುಕೊಂಡ ಪ್ರಕರಣಗಳಲ್ಲಿ, ಪರಿಷ್ಕರಿಸಿದ ತಾತ್ಕಾಲಿಕ ಹಂಚಿಕೆ ದರ ರೂ.73.82 ಲಕ್ಷವಾಗಿದ್ದು, ಈ ವ್ಯತ್ಯಾಸದ ಮೊತ್ತವನ್ನು ಪಾವತಿಸಿಕೊಂಡು, ಸಪ್ಲಿಮೆಂಟರಿ ಗುತ್ತಿಗೆ ಕರಾರು ಪತ್ರ ಮಾಡಿಕೊಡಲಾಗಿದೆ. ಸಪ್ಲಿಮೆಂಟರಿ ಗುತ್ತಿಗೆ ಕರಾರು ಪತ್ರದಲ್ಲಿ ಹಿಂದೆ ನೋಂದಣಿಯಾಗಿರುವ ಗುತ್ತಿಗೆ ಕರಾರು ಪತ್ರದ ನೋಂದಣಿ ಸಂಖ್ಯೆಯನ್ನು ನಮೂದಿಸಿ, ಹೆಚ್ಚುವರಿಯಾಗಿ ಪಾವತಿಸಿರುವ ವ್ಯತ್ಯಾಸದ ಮೊತ್ತವನ್ನು ನಮೂದಿಸಲಾಗಿದೆ. ಕೆ.ಐ.ಎ.ಡಿ.ಬಿ.ಯು ನೀಡಿದ ಸಪ್ಲಿಮೆಂಟರಿ

		ಗುತ್ತಿಗೆ ಕರಾರು ಪತ್ರದ ಅನ್ವಯ ಹೆಚ್ಚುವರಿಯಾಗಿ ಪಾವತಿಸಿರುವ ವ್ಯತ್ಯಾಸದ ಮೊತ್ತಕ್ಕೆ ಸಂಬಂಧಪಟ್ಟ ಉಪ ನೊಂದಣಾಧಿಕಾರಿ ಇವರು ಒಪ್ಪದೇ, ಒಟ್ಟು ಪರಿಷ್ಕೃತ ಹಂಚಿಕೆ ದರ ರೂ.73.82 ಲಕ್ಷದಂತೆ ಮುದ್ರಾಂಕ ಶುಲ್ಕ ಹಾಗೂ ನೋಂದಣಿ ಶುಲ್ಕಗಳನ್ನು ಪಡೆದು, ನೊಂದಣಿ ಮಾಡಿರುತ್ತಾರೆ.

(ಜಗದೀಶ ಶೆಟ್ಟರ)

ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರು

ಸಂಖ್ಯೆ: ಸಿಐ 51 ಐಎಪಿ (ಇ) 2021